**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ. 608/2019**

**ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ,1**

ದಿಃ **05.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | ಬಸಪ್ಪ |
| **ಗಂಡ/ತಂದೆಯ ಹೆಸರು** | **ನಾಗಪ್ಪ** |
| **ವಯಸ್ಸು** | 46 ವರ್ಷ |
| **ಕೆಲಸ** | **ಕೆ ಎಸ್ ಆರ್ ಟಿ ಸಿ ಡ್ರೈವರ್** |
| ವಾಸಸ್ಥಳ | ಹೆಚ್ ಡಿ ಕೋಟೆ |

**(1,3,4 ಆರೋಪಿ ಗೈರುಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).**

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:**

ಆರೋಪಿತರು ಗೊತ್ತು. ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ದಿಃ**18.03.2012** ರಂದು ನಾನು ಹಾಗೂ ಚಾಸಾ**2** ರವರು ಹೆಚ್ ಡಿ ಕೋಟೆ ಡಿಪೋದಿಂದ ಕೆಎ **09** ಎಫ್ **3720** ಬಸ್ಸಿಗೆ ಕರ್ತವ್ಯಕ್ಕಾಗಿ ನೇಮಕಗೊಂಡಿರುತ್ತೇವೆ. ಸದರಿ ದಿನಾಂಕದಂದು ಬೆಳಿಗ್ಗೆ **10** ಗಂಟೆಗೆ ಹೆಚ್ ಡಿ ಕೋಟೆಯಿಂದ ಮೈಸೂರಿನ ಕಡೆಗೆ ನಂತರ ಮೈಸೂರಿನಿಂದ ಗದ್ದಿಗೆಗೆ ಪ್ರಯಾಣಿಸಿ ಗದ್ದಿಗೆಯಲ್ಲಿ ಪ್ರಯಾಣಿಕರನ್ನು ಇಳಿಸಲು ಬಸ್ಸನ್ನು ನಿಲ್ಲಿಸಿದ್ದೆವು. ಆಗ ಸಮಯ ಮಧ್ಯಾಹ್ನ **2** ಗಂಟೆಯಾಗಿತ್ತು. ಆಗ **1** ರಿಂದ **4** ನೇ ಆರೋಪಿತರು ಬಂದು ನನಗೆ ಹೊಡೆದಿರುತ್ತಾರೆ. ನಾನು ಯಾವ ಕಾರಣಕ್ಕಾಗಿ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಆರೋಪಿತರು ನೀವು ಬಸ್ಸನ್ನು ನಮಗೆ ನಿಲ್ಲಿಸಲಿಲ್ಲ ಎಂಬ ಕಾರಣಕ್ಕೆ ಹೊಡೆಯುತ್ತಿದ್ದೇವೆ ಎಂದು ಹೇಳಿದರು. **4** ನೇ ಆರೋಪಿ ಹೊಡೆದಿರುತ್ತಾರೆ. **3** ನೇ ನನ್ನನ್ನು ಎಳೆದಾಡಿರುತ್ತಾರೆ. **2** ನೇ ಆರೋಪಿ ಎಡಭಾಗಕ್ಕೆ ಹೊಡೆದಿರುತ್ತಾರೆ. **3** ನೇ ಆರೋಪಿ ಬೆನ್ನಿಗೆ ಹೊಡೆದಿರುತ್ತಾರೆ. ಒಬ್ಬ ಆರೋಪಿ ನನಗೆ ಬೈದಿರುತ್ತಾರೆ. ಆರೋಪಿತರು ಹೊಡೆದ ಕಾರಣ ನನಗೆ ನೋವಾಗಿರುತ್ತದೆ. ಅದಕ್ಕಾಗಿ ನಾನು ಚಿಕಿತ್ಸೆಯನ್ನು ಪಡೆದಿರುತ್ತೇನೆ. ನಂತರ ಠಾಣೆಗೆ ಹೋಗಿ ದೂರನ್ನು ದಾಖಲಿಸಿದ್ದೇನೆ. ಸಾಕ್ಷಿಗೆ ದೂರನ್ನು ತೋರಿಸಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ದೂರನ್ನು ನಿಪಿ**1** ಹಾಗೂ ಸಾಕ್ಷಿ ಸಹಿಯನ್ನು ನಿಪಿ**1(ಎ)** ಎಂದು ಗುರುತಿಸಲಾಯಿತು.

ದಿ:**20.03.2012** ರಂದು ಮಧ್ಯಾಹ್ನ **1** ರಿಂದ **2** ಗಂಟೆಯವರೆಗೆ ಪೊಲೀಸರು ಗದ್ದಿಗೆ ಬಸ್ ನಿಲ್ದಾಣದಲ್ಲಿ ಮಹಜರ್ ಕ್ರಮ ಜರುಗಿಸಿದ್ದರು**.** ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತೇನೆ**.** ಆ ಸಮಯದಲ್ಲಿ ನನ್ನೊಂದಿಗೆ ಚಾಸಾ**2** ಮತ್ತು **4** ರವರು ಇದ್ದರು**.** ಪೊಲೀಸರು ಮಹಜರ್ ಕ್ರಮ ಜರುಗಿಸಿ ಸ್ಥಳದಿಂದ ನನ್ನ ಶರ್ಟನ್ನು ಅಮಾನತ್ತುಪಡಿಸಿಕೊಂಡರು**.** ಸಾಕ್ಷಿಗೆ ಮಹಜರ್ ನ್ನು ತೋರಿಸಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ**.** ಮಹಜರ್ ರನ್ನು ನಿಪಿ**2** ಹಾಗೂ ಸಾಕ್ಷಿ ಸಹಿಯನ್ನು ನಿಪಿ**2(**ಎ**)** ಎಂದು ಗುರುತಿಸಲಾಯಿತು**.** ಸಾಕ್ಷಿ ಮಹಜರ್ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ಶರ್ಟನ್ನು ನೋಡಿ ಗುರುತಿಸಿದ್ದು**,** ಅದನ್ನು ಮು ಮಾ **1** ಎಂದು ಗುರುತಿಸಲಾಯಿತು**.**

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ**

ಆರೋಪಿತರು ಸುಮಾರು 2 ತಿಂಗಳ ಹಿಂದೆ ಬಸ್ಸನ್ನು ನಿಲ್ಲಿಸಿಲ್ಲವೆಂದು ಏಕಾಏಕಿ ಜಗಳವನ್ನು ತೆಗೆದರು ಎಂದರೆ ಸರಿ. 4 ನೇ ಆರೋಪಿ ನಿಮ್ಮನ್ನು ಅಡ್ಡಗಟ್ಟಿ ತಬ್ಬಿ ಹಿಡಿದುಕೊಂಡ ಎಂದರೆ ಸರಿ. 2 ನೇ ಆರೋಪಿ ನಿಮ್ಮ ಎಡಕಪಾಲಕ್ಕೆ ಕೈಯಿಂದ ಹೊಡೆದ ಎಂದರೆ ಸರಿ. 3 ನೇ ಆರೋಪಿ ನಿಮಗೆ ಕೈಯಿಂದ ಮೈಕೈಗೆ ಹೊಡೆದ ಎಂದರೆ ಸರಿ. 1 ನೇ ಆರೋಪಿ ಅವಾಚ್ಯಶಬ್ದಗಳಿಂದ ಬೈದು ನಮ್ಮ ಹುಡುಗರಿಗೆ ಬಸ್ಸನ್ನು ನಿಲ್ಲಿಸಿಲ್ಲವಾ ಎಂದು ಕಾಲಿನಿಂದ ಬೆನ್ನಿಗೆ ಒದ್ದ ಎಂದರೆ ಸರಿ. 4 ನೇ ಆರೋಪಿ ನಿಮ್ಮ ಸಮವಸ್ತ್ರವನ್ನು ಹಿಡಿದು ಎಳೆದಾಡಿ ಹರಿದ ಎಂದರೆ ಸರಿ. ಆರೋಪಿತರಿಗೆ ನೀವು ಬಸ್ಸಿನಲ್ಲಿ ಪ್ರಯಾಣಿಕರಿದ್ದಾರೆ ಅವರನ್ನು ಹೆಚ್ ಡಿ ಕೋಟೆಗೆ ಬಿಡಬೇಕೆಂದು ಹೇಳಿದರೂ ಸಹ ಆರೋಪಿತರು ನಿಮಗೆ ಹೊಡೆಯುತ್ತಿದ್ದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ2 ಮತ್ತು 3 ರವರು ಜಗಳವನ್ನು ಬಿಡಿಸಿ ಸಮಾಧಾನಪಡಿಸಿದರು ಎಂದರೆ ಸರಿ. ನಂತರ ನೀವು ಬಿಳಿಕೆರೆ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುತ್ತೀರಿ ಎಂದರೆ ಸರಿ. ನೀವು ಬಿಳಿಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೊಲೀಸರು ಬಂದು ದೂರನ್ನು ಪಡೆದಿರುತ್ತಾರೆ ಎಂದರೆ ಸರಿ. ನಿಪಿ2 ನ್ನು ಜರುಗಿಸಿದಾಗ ಸಮಯ ಮಧ್ಯಾಹ್ನ 2 ರಿಂದ 3 ಗಂಟೆಯಾಗಿತ್ತು ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ ಎಂ ವಕೀಲರಿಂದಃ**

ದಿ:18.03.2012 ರಂದು ಹೆಚ್ ಡಿ ಕೋಟೆಯಿಂದ ಗದ್ದಿಗೆಯ ಮಾರ್ಗಕ್ಕೆ ಮೊದಲನೇ ಬಾರಿ ನೇಮಕ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆಗಾಗ ಆ ಮಾರ್ಗದಲ್ಲಿ ನೇಮಕವಾಗಿದ್ದೆ**,** ಮೊದಲನೆ

ಬಾರಿಯಲ್ಲ. ಮಾರ್ಗದ ಸಂಖ್ಯೆ 104, 105. ಹೆಚ್ ಡಿ ಕೋಟೆಯಿಂದ ಗದ್ದಿಗೆ ತಲುಪಿದಾಗ ಸಮಯ 11 ಗಂಟೆಯಾಗಿತ್ತು. ಗದ್ದಿಗೆಯಿಂದ ಹೊರಟಾಗ 11.15 ಗಂಟೆಯಾಗಿತ್ತು. ಗದ್ದಿಗೆಯಿಂದ ಮೈಸೂರಿನ ದಾರಿಯಲ್ಲಿ ಹಲವಾರು ಬಾರಿ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿ, ಇಳಿಸಿ ಹೋಗಬೇಕೆಂದರೆ ಸರಿ. ಗದ್ದಿಗೆಯಿಂದ ಮೈಸೂರಿಗೆ ಹೋಗಲು ಸುಮಾರು 1-1.30 ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿ ಟ್ರಾಫಿಕ್ ಮತ್ತು ಪ್ರಯಾಣಿಕರ ಮೇಲೆ ಡಿಪೆಂಟ್ ಆಗುತ್ತದೆ. ಗದ್ದಿಗೆಯನ್ನು 11.15 ಗೆ ಬಿಟ್ಟರೆ ಸುಮಾರು 12.30 ಗೆ ಮೈಸೂರನ್ನು ತಲುಪಬಹುದು ಎಂದರೆ ಸರಿ. ಮೈಸೂರಿನಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಹಾಗೂ ಇಳಿಸಲು ಸುಮಾರು ಅರ್ಧ ಗಂಟೆಯಾಗುತ್ತದೆ ಎಂದರೆ ಸಾಕ್ಷಿ ಹತ್ತಿಸಿಕೊಂಡು ಹೊರಡುತ್ತೇವೆ ಅಷ್ಟೊಂದು ಸಮಯ ಆಗುವುದಿಲ್ಲ. ಮೈಸೂರನ್ನು 12.30 ಕ್ಕೆ ಬಿಟ್ಟರೆ ಗದ್ದಿಗೆಗೆ 1.15-1.30 ಸಮಯದಲ್ಲಿ ತಲುಪಬಹುದು ಎಂದರೆ ಸರಿ.

ಆರೋಪಿತರಿಗೂ ಹಾಗೂ ನಿಮಗೂ ಪರಿಚಯವಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆಗಾಗ ನಮ್ಮ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದರು. ಆರೋಪಿತರು ಯಾವ ಯಾವ ಗ್ರಾಮದಲ್ಲಿ ಬಸ್ಸನ್ನು ಹತ್ತುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರ ಹೆಸರು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಅವರು ಹೇಳಿದರೆ ಗೊತ್ತಾಗುತ್ತದೆ. ಹಲ್ಲೆ ಮಾಡುವ ಸಮಯದಲ್ಲಿ ಆರೋಪಿತರ ಹೆಸರು ಗೊತ್ತಾಗಲಿಲ್ಲ ಎಂದರೆ ಸರಿ. ನೀವು ಮಾರ್ಗದ ಸಂಖ್ಯೆ 104, 105 ಕ್ಕೆ ನೇಮಕಗೊಂಡ ಬಗ್ಗೆ ಯಾವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರಿದು ಡಿಪೋದಲ್ಲಿ ಸದರಿ ದಾಖಲೆಗಳು ಇರುತ್ತವೆ, ಪೊಲೀಸರು ಅವುಗಳನ್ನು ತರಿಸಿಕೊಂಡಿರಬಹುದು. ಗದ್ದಿಗೆಯಲ್ಲಿ ಗಲಾಟೆಯಾದ ನಂತರ ಹೆಚ್ ಡಿ ಕೋಟೆಗೆ ಪ್ರಯಾಣಿಕರನ್ನು ಬಿಡಲು ಹೋಗಿರುವುದಿಲ್ಲ. ಸದರಿ ಗಲಾಟೆಯ ಬಗ್ಗೆ ನಮ್ಮ ಡಿಪೋ ಮ್ಯಾನೇಜರ್ ಗೆ ತಿಳಿಸಿದ್ದು, ಇನ್ನೊಂದು ಬಸ್ಸನ್ನು ಕಳುಹಿಸಲು ಹೇಳಿರುತ್ತೇವೆ. ಹೆಚ್ ಡಿ ಕೋಟೆಯಿಂದ ಗದ್ದಿಗೆಗೆ ಕಳುಹಿಸಿದ ಬಸ್ಸಿನ ಸಂಖ್ಯೆ ಗೊತ್ತಿಲ್ಲ. ನಿಮ್ಮಬಸ್ಸಿನಲ್ಲಿ ಎಷ್ಟು ಪ್ರಯಾಣಿಕರು ಎಂಬ ಬಗ್ಗೆ ಇನ್ನೊಂದು ಬಸ್ಸಿಗೆ ತಿಳಿಸಬೇಕು ಎಂದರೆ ಸರಿ. ಟಿಕೆಟ್ ನ್ನು ನೀಡಿದ ಬಗ್ಗೆ ಲೆಡ್ಜರ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಇದರ ಬಗ್ಗೆ ಚಾಸಾ2 ರವರಿಗೆ ಗೊತ್ತು.

ಮು ಮಾ 1 ನ್ನು ಘಟನಾ ದಿನದಂದು ಧರಿಸಿದ್ದ ಬಗ್ಗೆ ಯಾವುದೇ ವಿಶೇಷ ಗುರುತು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನೇಮ್ ಪ್ಲೇಟನ್ನು ನಾನು ತೆಗೆದುಕೊಂಡಿರುತ್ತೇನೆ, ಮು ಮಾ 1 ರ ಮೇಲೆ

ಒಂದು ಪ್ಯಾಚ್ ಗುರುತು ಇದೆ. ಮು ಮಾ 1ನ್ನು ವಶಪಡಿಸಿಕೊಳ್ಳುವ ಕಾಲಕ್ಕೆ ಪೊಲೀಸರು ಅದರ ಮೇಲೆ ಚೀಟಿಯನ್ನು ಅಂಟಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ. ಸದರಿ ಚೀಟಿ ಇಂದು ಕಂಡುಬರುತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅಂದು ಅಂಟಿಸಿದ್ದರು. ಆ ಚೀಟಿಯ ಮೇಲೆ ನಾನೊಬ್ಬನೇ ಸಹಿ ಮಾಡಿರುತ್ತೇನೆ. ಘಟನಾ ಸ್ಥಳದಿಂದ ಬಿಳಿಕೆರೆ ಆಸ್ಪತ್ರೆಗೆ ಹೋದಾಗ ಮಧ್ಯಾಹ್ನ 3.30 ರಿಂದ 4 ಗಂಟೆಯಾಗಿತ್ತು. ನನ್ನೊಂದಿಗೆ ಚಾಸಾ2ರವರು ಬಂದಿದ್ದರು. ಆಸ್ಪತ್ರೆಗೆ ನಮ್ಮ ಬಸ್ಸಿನಲ್ಲಿಯೇ ಹೋಗಿರುತ್ತೇವೆ. ನಿಪಿ1ನ್ನು ನೀಡುವಾಗ ಸಮಯ ಸುಮಾರು 4-4.30 ಗಂಟೆಯಾಗಿತ್ತು. ಬಿಳಿಕೆರೆ ಆಸ್ಪತ್ರೆಯಲ್ಲಿ ಸುಮಾರು 2 ಗಂಟೆವರೆಗೂ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಸಾಕ್ಷಿ ಮುಂದುವರಿದು ಕೇವಲ ಒಂದು ಇಂಜೆಕ್ಷನ್ ನೀಡಿರುತ್ತಾರೆ. ನಿಪಿ2ನ್ನು ಜರುಗಿಸುವ ಮುನ್ನ ಪೊಲೀಸರು ನಿಮಗೆ ಯಾವುದೇ ನೋಟಿಸ್ಸನ್ನು ನೀಡಿರುವುದಿಲ್ಲ ಎಂದರೆ ಸರಿ. ನಿಪಿ2ನ್ನು ಪೊಲೀಸರು ಬರೆದಿರುತ್ತಾರೆ. ನಿಪಿ2ನ್ನು ನಾನು ಹೇಳಿ ಬರೆಸಿರುತ್ತೇನೆ. ನಿಪಿ2ರಲ್ಲಿ ನಿಮ್ಮ ಬಿಲ್ಲೆ ಸಂಖ್ಯೆ ಬರೆಸಿದ್ದೀರಾ ಎಂದರೆ ಸಾಕ್ಷಿ ತುಂಬಾ ವರ್ಷವಾದ ಕಾರಣ ನೆನಪಿಲ್ಲ. ಆರೋಪಿತರು ನಿಮ್ಮ ಮೇಲೆ ಯಾವುದೇ ಹಲ್ಲೆ ಮಾಡದಿದ್ದರೂ ಅವರ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,

ಹುಣಸೂರು.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 608/2019

ಸಿ.ಡಬ್ಲ್ಯೂ-2, ಪಿ.ಡಬ್ಲ್ಯೂ-2

ದಿಃ **05.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಗಣಪತಿ ಬಿರಾದರ್ |
| ಗಂಡ/ತಂದೆಯ ಹೆಸರು | ಸಿದ್ದಣ್ಣ |
| ವಯಸ್ಸು | 43 ವರ್ಷ |
| ಕೆಲಸ | ಕೆ ಎಸ್ ಆರ್ ಟಿ ಸಿ ಕಂಡಕ್ಟರ್ |
| ವಾಸಸ್ಥಳ | ಹೆಚ್ ಡಿ ಕೋಟೆ |

**(1,3,4 ಆರೋಪಿ ಗೈರುಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).**

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನಾನು 2008 ರಿಂದ ಕೆ ಎಸ್ ಆರ್ ಟಿ ಸಿ ಯಲ್ಲಿ ಕಂಡಕ್ಟರ್ ಆಗಿ ಇಲ್ಲಿಯವರೆಗೂ ಕರ್ತವ್ಯ ಮಾಡುತ್ತಿದ್ದೇನೆ. ಆರೋಪಿತರು ಗೊತ್ತು. ಅವರನ್ನು ನೋಡಿದರೆ ನಾನು ಗುರುತಿಸುತ್ತೇನೆ, ಆದರೆ ಬಹಳ ವರ್ಷವಾದ ಕಾರಣ ನಿಖರವಾಗಿ ಗುರುತಿಸಲು ಆಗುವುದಿಲ್ಲ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ತುಂಬ ವರ್ಷವಾದ ಕಾರಣ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಚಾಸಾ**1** ರವರು ಗೊತ್ತು, ಅವರು ಕೆ ಎಸ್ ಆರ್ ಟಿ ಸಿ ಬಸ್ ಚಾಲಕ. ಚಾಸಾ**3** ರವರು ಗೊತ್ತು. ದಿಃ**18.03.2012** ರಂದು ನಾನು ಹಾಗೂ ಚಾಸಾ**1** ರವರು ಹೆಚ್ ಡಿ ಕೋಟೆ ಡಿಪೋದಿಂದ ಕೆಎ **09** ಎಫ್ **3720** ಬಸ್ಸಿಗೆ ಕರ್ತವ್ಯಕ್ಕಾಗಿ ನೇಮಕಗೊಂಡಿರುತ್ತೇವೆ. ಸದರಿ ದಿನಾಂಕದಂದು ಬೆಳಿಗ್ಗೆ **9** ಗಂಟೆಗೆ ಹೆಚ್ ಡಿ ಕೋಟೆಯಿಂದ ಮೈಸೂರಿನ ಕಡೆಗೆ ನಂತರ ಮೈಸೂರಿನಿಂದ ಗದ್ದಿಗೆಗೆ ಪ್ರಯಾಣಿಸಿ ಗದ್ದಿಗೆಯಲ್ಲಿ ಪ್ರಯಾಣಿಕರನ್ನು ಇಳಿಸಲು ಬಸ್ಸನ್ನು ನಿಲ್ಲಿಸಿದ್ದೆವು. ಆಗ ಸಮಯ ಮಧ್ಯಾಹ್ನ **2** ಗಂಟೆಯಾಗಿತ್ತು. ಆಗ **1** ರಿಂದ **4** ನೇ ಆರೋಪಿತರು ಬಂದು ಚಾಸಾ**1** ರವರಿಗೆ ಹೊಡೆದಿರುತ್ತಾರೆ. ಆರೋಪಿತರು ಈ ಹಿಂದೆ **2-3** ತಿಂಗಳ ಹಿಂದೆ ಬಸ್ಸನ್ನು ನಿಲ್ಲಿಸಲಿಲ್ಲ ಎಂಬ ಕಾರಣಕ್ಕೆ ಚಾಸಾ**1** ರವರಿಗೆ ಹೊಡೆದಿರುತ್ತಾರೆ. ಆ ಸಮಯದಲ್ಲಿ ನಾನು ಜಗಳವನ್ನು ಬಿಡಿಸಲು ಹೋಗಿರುತ್ತೇನೆ. ಆರೋಪಿತರು ನನಗೂ ಹೊಡೆಯುತ್ತೇನೆ ಎಂದು ಬೆದರಿಕೆ ಹಾಕಿದರು. ಆದ ಕಾರಣ ನಾನು ಸುಮ್ಮನಾದೆ.

ಚಾಸಾ**1** ರವರಿಗೆ ಬಹಳ ಏಟಾದ ಕಾರಣ ಅವರನ್ನು ಕರೆದುಕೊಂಡು ಹೋಗಿ ಬಿಳಿಕೆರೆ ಆಸ್ಪತ್ರೆಯಲ್ಲಿ ದಾಖಲಿಸಿದ್ದೆವು. ಸದರಿ ಗಲಾಟೆಯ ಬಗ್ಗೆ ನಾನು ಡಿಪೋ ಮ್ಯಾನೇಜರ್ ಗೆ ದೂರವಾಣಿ ಮುಖಾಂತರ

ತಿಳಿಸಿರುತ್ತೇನೆ. ಅವರು ಹತ್ತಿರ ಇರುವ ಪೊಲೀಸ್ ಠಾಣೆಗೆ ದೂರನ್ನು ನೀಡಲು ಆದೇಶಿಸಿದರು. ಅದರಂತೆ ನಾವು ಬಿಳಿಕೆರೆ ಆಸ್ಪತ್ರೆಯಲ್ಲಿ ಚಾಸಾ1 ರವರನ್ನು ದಾಖಲಿಸಿ ಚಿಕಿತ್ಸೆಯನ್ನು ಕೊಡಿಸಿರುತ್ತೇವೆ. ಅಲ್ಲಿಗೆ ಪೊಲೀಸರು ಬಂದು ಚಾಸಾ1 ರವರಿಂದ ನಿಪಿ1 ನ್ನು ಪಡೆದಿರುತ್ತಾರೆ. ಸದರಿ ಗಲಾಟೆಯಿಂದ ನಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿಯುಂಟಾಗಿರುತ್ತದೆ. ಈ ಬಗ್ಗೆ ನಾನು ಪೊಲೀಸರು ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ2 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸಹಿಯನ್ನು ನಿಪಿ2(ಬಿ) ಎಂದು ಗುರುತಿಸಲಾಯಿತು. ದಿಃ20.08.2012 ರಂದು ಮಧ್ಯಾಹ್ನ 2 ರಿಂದ 3 ಗಂಟೆ ಸಮಯದಲ್ಲಿ ಪೊಲೀಸರು ನಿಪಿ2 ನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ1 ಮತ್ತು ಇನ್ನೊಬ್ಬರು ಇದ್ದರು ಅವರ ಹೆಸರು ಗೊತ್ತಿಲ್ಲ. ಆ ಸಮಯದಲ್ಲಿ ಪೊಲೀಸರು ಚಾಸಾ1 ರವರ ಸಮವಸ್ತ್ರವನ್ನು ಅಮಾನತ್ತುಪಡಿಸಿಕೊಂಡರು. ಮು ಮಾ 1 ನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ ವಕೀಲರಿಂದಃ**

ದಿಃ20.03.2012 ರಂದು ಪೋಲೀಸರು ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಿಮ್ಮೊಂದಿಗೆ ಚಾಸಾ4 ರವರು ಇದ್ದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿ ಆ ದಿನ ಘಟನಾ ಸ್ಥಳದಲ್ಲಿ ಇದ್ದರು ಹಾಗೂ ಅವರು 2 ನೇ ಆರೋಪಿ ಎಂದರೆ ಸಾಕ್ಷಿ ಇರಬಹುದು, ನನಗೆ ಸರಿಯಾಗಿ ನೆನಪಿಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ ಎಂ ವಕೀಲರಿಂದಃ**

ಸಾಮಾನ್ಯವಾಗಿ ಬಸ್ ನಿಲ್ಲಿಸಿದ ಸಮಯದಲ್ಲಿ ಚಾಲಕರು ಬಸ್ಸಿನಲ್ಲಿ ಇರುತ್ತಾರೆ. ಕಂಡಕ್ಟರ್ ಕೆಳಗೆ ಇಳಿದು ಪ್ರಯಾಣಿಕರಿಗೆ ಚಿಲ್ಲರೆಯನ್ನು ನೀಡುತ್ತಿರುತ್ತಾರೆ ಎಂದರೆ ಸರಿ. ಯಾವ ಆರೋಪಿ ಯಾವ ರೀತಿ ಹಲ್ಲೆ ಮಾಡಿದರು ಎಂದು ನಿಮಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಹೊಡೆದರು ಎಂದು ಗೊತ್ತು. ಗಲಾಟೆಯಾದ ಕಾರಣ ನಮ್ಮ ಬಸ್ಸಿನ ಪ್ರಯಾಣಿಕರನ್ನು ಬೇರೆ ಬಸ್ಸಿಗೆ ಕಳುಹಿಸಿಕೊಟ್ಟಿರುತ್ತೇವೆ. ಆ ಬಸ್ಸಿನ ಸಂಖ್ಯೆಯನ್ನು ಹೇಳಲಾಗುವುದಿಲ್ಲ. ನೀವು ನೀಡಿದ್ದ ಟಿಕೆಟನ್ನು ಬೇರೆ ಬಸ್ಸಿನ ಕಂಡಕ್ಟರ್ ಗೆ ನೀಡಿರುತ್ತೀರಿ ಎಂದರೆ ಸರಿ. ಆ ಬಸ್ಸು ಯಾವ ಮಾರ್ಗದಿಂದ ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ಚಾಸಾ1 ರವರನ್ನು ನಮ್ಮ ಬಸ್ಸಿನಲ್ಲಿಯೇ ಆಸ್ಪತ್ರೆಗೆ ಸುಮಾರು 2.30 ಗಂಟೆಗೆ ಕರೆದುಕೊಂಡು ಹೋಗಿರುತ್ತೇವೆ. ಡಿಪೋ ಮ್ಯಾನೇಜರ್ ಘಟನಾ ಸ್ಥಳಕ್ಕೆ ಅಥವಾ ಆಸ್ಪತ್ರೆಗೆ ಬಂದಿರುವುದಿಲ್ಲ

ಎಂದರೆ ಸರಿ. ಠಾಣೆಗೂ ಸಹ ಬಂದಿರುವುದಿಲ್ಲ. ಚಾಸಾ1 ರವರೊಂದಿಗೆ ಆಸ್ಪತ್ರೆಯಲ್ಲಿ ಸಂಜೆ ಸುಮಾರು 5-6 ಗಂಟೆಯವರೆಗೂ ಇದ್ದೆ. ಚಾಸಾ1 ರವರು ರಾತ್ರಿ 9 ಗಂಟೆಯವರೆಗೂಾ ಚಿಕಿತ್ಸೆಯನ್ನು ಪಡೆದಿರುತ್ತಾರೆ. ನಿಪಿ1 ನ್ನು ಪಡೆಯಲು ಪೊಲೀಸರು ಬಂದಿದ್ದರು, ಅವರ ಹೆಸರು ಹೇಳಲಾಗುವುದಿಲ್ಲ. ನಿಪಿ1 ನ್ನು ರಾತ್ರಿ 9 ಗಂಟೆ ಸಮಯದಲ್ಲಿ ಪಡೆದಿರುತ್ತಾರೆ. ಪೊಲೀಸರು ನಿಪಿ2 ಕ್ಕೆ ಬರಲು ಯಾವುದೇ ನೋಟಿಸ್ ನೀಡಿರುವುದಿಲ್ಲ. ನಿಪಿ2 ರಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ನಿಪಿ2 ರಲ್ಲಿ ಚಾಸಾ1 ಹಾಗೂ ನಿಮ್ಮ ಬಿಲ್ಲೆ ಸಂಖ್ಯೆ ನಮೂದಾಗಿಲ್ಲ ಎಂದರೆ ಸರಿ. ಮು ಮಾ 1 ನ್ನು ಚಾಸಾ1 ರವರೇ ಧರಿಸಿದ್ದರು ಎಂದು ನಿಖರವಾಗಿ ಹೇಳಬಹುದು ಯಾಕೆಂದರೆ ಎರಡೂ ಜೇಬುಗಳು ಹರಿದು ಹೋಗಿವೆ. ಮು ಮಾ 1 ರ ಮೇಲೆ ಬಿಲ್ಲೆ ಸಂಖ್ಯೆ ಅಥವಾ ನೇಮ್ ಪ್ಲೇಟ್ ಇಲ್ಲ ಎಂದರೆ ಸರಿ. ಮು ಮಾ 1 ನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಯಾವುದೇ ಚೀಟಿಯನ್ನು ಅಂಟಿಸಿ ನನ್ನ ಸಹಿಯನ್ನು ಪಡೆದಿರುವುದಿಲ್ಲ. ಚೀಟಿಯ ಮೇಲೆ ಚಾಸಾ1 ರವರ ಅಥವಾ ಚಾಸಾ4 ರವರ ಸಹಿಯನ್ನು ಪಡೆದಿರುವುದಿಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ ಅವರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.